ಡಾ॥ ಎಸ್. ಸೆಲ್ವಕುಮಾರ್, ಭಾ.ಆ.ಸೇ.,
ಮುಖ್ಯ ಮಂತ್ರಿಯವರ ಕಾರ್ಯದರ್ಶಿ

**Dr. S. SELVAKUMAR**, I.A.S.,
*Secretary to Chief Minister*

ಮುಖ್ಯ ಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು-೫೬೦ ೦೦೧

Chief Minister's Secretariat
Vidhana Soudha
Bengaluru-560 001

Ph. No. 080-22251476
22033372
Fax No. : 22353126


P.E.S. COLLEGE OF ENGINEERING
29 MAY 2020
MANDYA

ಸಿಎಂ/42/ಸಿಎಂಆರ್ಎಫ್/ಜಿಇಎನ್/2020

ದಿನಾಂಕ : 07/05/2020

ಮಾನ್ಯರೇ,

ಕೋವಿಡ್ 19 ಸಾಂಕ್ರಾಮಿಕ ರೋಗವು ಹರಡುವುದನ್ನು ತಪ್ಪಿಸಲು ರಾಜ್ಯ ಮತ್ತು ರಾಷ್ಟ್ರದಲ್ಲಿ 21 ದಿನಗಳ ಕಾಲ ಲಾಕ್‌ಡೌನ್ ಮಾಡಲಾಗಿದ್ದು, ಸಾರ್ವಜನಿಕರು ಹೊರಬರದಂತೆ ಎಚ್ಚರಿಕೆಯನ್ನು ವಹಿಸಲಾಗಿದೆ. ಇದರಿಂದ ರೈತರು, ದಿನಗೂಲಿ ನೌಕರರು, ಕಟ್ಟಡ ನಿರ್ಮಾಣ ಕಾರ್ಮಿಕರು, ಸಣ್ಣ ಕೈಗಾರಿಕೆ ಮಾಲೀಕರು ಮತ್ತು ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಕ್ಯಾಬ್ ಮತ್ತು ಆಟೋ ಚಾಲಕರು, ಮುಂತಾದವರು ತೊಂದರೆಗೊಳಗಾಗಿರುವುದನ್ನು ಗಮನಿಸಲಾಗಿದೆ. ಸದರಿ ಸಂತ್ರಸ್ತರಿಗೆ ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದು, ಈ ಮಾರಕ ಸಾಂಕ್ರಾಮಿಕ ರೋಗ ಹರಡುವುದನ್ನು ತಪ್ಪಿಸುವುದು ಮತ್ತು ರೋಗಕ್ಕೆ ಒಳಗಾದವರಿಗೆ ಸುಸಜ್ಜಿತವಾದ ಚಿಕಿತ್ಸೆಯನ್ನು ನೀಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಈ ಕಾರ್ಯಕ್ಕಾಗಿ ತಾವು ಸರ್ಕಾರದೊಂದಿಗೆ ಕೈಜೋಡಿಸಿ ಸ್ಪಂದಿಸಿರುವುದು ಮಾನವೀಯ ಔದಾರ್ಯವೆಂದು ನಾನು ಭಾವಿಸಿದ್ದೇನೆ.

ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ತಾವು ಧನಾದೇಶ ಸಂಖ್ಯೆ: 838887 ದಿನಾಂಕ: 11/04/2020ರ ಮೂಲಕ ರೂ.6,78,207/-(ಆರು ಲಕ್ಷದ ಎಪ್ಪತ್ತೆಂಟು ಸಾವಿರದ ಇನ್ನೂರ ಏಳು ರೂಪಾಯಿಗಳು ಮಾತ್ರ) ಗಳನ್ನು ಸಲ್ಲಿಸಿದ್ದು ಈ ದೇಣಿಗೆಯನ್ನು ಹೃದಯಪೂರ್ವಕವಾಗಿ ಸ್ವೀಕರಿಸಿದೆ. ಪರಿಹಾರ ಕಾರ್ಯಗಳಿಗೆ ದೇಣಿಗೆ ಸಲ್ಲಿಸಿ ಸರ್ಕಾರಕ್ಕೆ ನೆರವಾಗಲು ಮುಂದೆ ಬಂದಿರುವುದು ಶ್ಲಾಘನೀಯ ವಿಷಯವಾಗಿರುತ್ತದೆ. ಈ ಕೋವಿಡ್ 19 ಸಾಂಕ್ರಾಮಿಕ ರೋಗವು ಹರಡುವುದನ್ನು ತಡೆದು, ಸಾರ್ವಜನಿಕರಿಗೆ ಸಾಮಾಜಿಕ ಜೀವನ ಸಾಗಿಸಲು ಅನುವಾಗುವಂತೆ ತಮ್ಮ ಅಮೂಲ್ಯ ಸಹಾಯವನ್ನು ಉಪಯೋಗಿಸಲು ಸರ್ಕಾರವು ಪ್ರಾಮಾಣಿಕವಾಗಿ ಶ್ರಮಿಸುತ್ತದೆ.

ಮಾನವೀಯ ನೆಲೆಯಲ್ಲಿ ತಾವು ನೀಡಿರುವ ಸಹಕಾರ ನಿರಂತರವಾಗಿ ಹೀಗೆಯೇ ಮುಂದುವರೆಯಲಿ ಎಂದು ಆಶಿಸುತ್ತಾ, ತಮ್ಮ ಈ ಉದಾರವಾದ ದೇಣಿಗೆಗಾಗಿ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಧನ್ಯವಾದಗಳನ್ನು ತಿಳಿಸಿರುತ್ತಾರೆಂದು ತಿಳಿಸಲು ಹರ್ಷಿಸುತ್ತೇನೆ.

ಗೌರವಪೂರ್ವಕ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಡಾ॥ ಎಸ್. ಸೆಲ್ವಕುಮಾರ್)
ಮುಖ್ಯಮಂತ್ರಿಯವರ ಕಾರ್ಯದರ್ಶಿ

**ಪ್ರಾಂಶುಪಾಲರು,**
ಪಿ.ಇ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್,
ಮಂಡ್ಯ.